

ಬಾಸ್ಟನ್ ನಗರದ ಪುಸ್ತಕ ವಿನಿಮಯ ಕಪಾಟು



ಲಾಸ್ ಏಂಜಲೀಸ್ ನಗರದ 'ಲಾಸ್ಟ್ ಬುಕ್ ಸ್ಟೋರ್'ನಲ್ಲಿ ಲೇಖಕರು

- ನಿಮ್ಮ ಮನೆಯಲ್ಲಿ ಬಹಳಷ್ಟು ಪುಸ್ತಕಗಳು ಇದ್ದಲ್ಲಿ ಹಾಗೂ ಅವುಗಳನ್ನು ನೀವು ಇಲ್ಲಿ ತಂದು ಇರಿಸಬೇಕು ಅನ್ನಿಸಿದಲ್ಲಿ, ದಯವಿಟ್ಟು ಇಲ್ಲಿ ಕಪಾಟಿನಲ್ಲಿ ಹಿಡಿಸುವಷ್ಟು ಪುಸ್ತಕಗಳನ್ನು ಮಾತ್ರ ತನ್ನಿ.
- ಕಪಾಟು ಈಗಾಗಲೇ ಭರ್ತಿಯಾಗಿದ್ದಲ್ಲಿ ಹೆಚ್ಚಿನ ಪುಸ್ತಕಗಳನ್ನು ಇಲ್ಲಿಡಬೇಡಿ!
- ನೆಲದ ಮೇಲಂತೂ ಇಡಲೇಬೇಡಿ.
- ಇಲ್ಲಿ ಏನಾದರೂ ಮುರಿದುಹೋಗಿದ್ದರೆ, ಕಪಾಟು ತುಂಬಿದ್ದಲ್ಲಿ ಅಥವಾ ಖಾಲಿಯಿದ್ದಲ್ಲಿ ನೀವು ಅದನ್ನು ಶುಚಿಗೊಳಿಸಲು ಅಥವಾ ಇತರ ಸಹಾಯ ಮಾಡಲು ಬಯಸಿದಲ್ಲಿ ನೀವು ನಮಗೆ ಕರೆಮಾಡಬಹುದು.

ಕೊನೆಯಲ್ಲಿ ಒಬ್ಬ ವ್ಯಕ್ತಿಯ ಹೆಸರು ಹಾಗೂ ದೂರವಾಣಿ ಸಂಖ್ಯೆ ನೀಡಲಾಗಿತ್ತು. ಮತ್ತೊಂದು ಚೀಟಿಯಲ್ಲಿ ಈ ರೀತಿಯ 'ತೆರೆದ ಪುಸ್ತಕ ಕಪಾಟು'ಗಳು ಆ ನಗರದಲ್ಲಿ ಎಲ್ಲೆಲ್ಲಿ ಇವೆ ಎಂಬುದರ ವಿಳಾಸ ನೀಡಲಾಗಿತ್ತು.

ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಸ್ಯಾಂಟ ಬಾರ್ಬರಾ ನಗರದಲ್ಲಿ ಒಂದೂವರೆ ತಿಂಗಳು ಸಮಯ ಕಳೆದೆ. ಅಲ್ಲಿ ಒಂದು ದಿನ ಸಂಜೆ ವಾಕ್ ಹೋಗುತ್ತಿದ್ದಾಗ ಮನೆಯೊಂದರ ಮುಂದೆ ಒಂದು ಕಪಾಟು ಇಟ್ಟಿದ್ದರು. ಅದರಲ್ಲಿ ಪುಸ್ತಕಗಳು ಹಾಗೂ ಇನ್ನಿತರ ವಸ್ತುಗಳಿದ್ದವು. ಎಂದಿನಂತೆ ಕುತೂಹಲದಿಂದ ಹತ್ತಿರ ಹೋಗಿ ನೋಡಿದೆ. ಅದರ ಮೇಲೆ ಒಂದು ಚೀಟಿ ಅಂಟಿಸಿದ್ದರು: **'If you like it, take it'** ಎಂದು ಅದರಲ್ಲಿ ಬರೆದಿತ್ತು. ಆ ಮನೆಯವರಿಗೆ ಬೇಡವಾದ ಪುಸ್ತಕಗಳನ್ನು ಹಾಗೂ ಇತರ ವಸ್ತುಗಳನ್ನು ಬೇಕಾದವರು ತೆಗೆದುಕೊಂಡು ಹೋಗಲಿ ಎಂದು ಮನೆ ಮುಂದೆ ರಸ್ತೆಯ ಬದಿಯಲ್ಲಿ ಇರಿಸಿದ್ದರು. ಅದೇ ನಗರದ ಮತ್ತೊಂದು ರಸ್ತೆಯಲ್ಲಿ ರಸ್ತೆ ಬದಿ ಒಂದು ಮರದ ಕಂಬದ ಮೇಲೆ ಜೇನುಪೆಟ್ಟಿಗೆಯಂಥ ಪೆಟ್ಟಿಗೆ ಕಾಣಿಸಿತು. ಅದರೊಳಗೂ ಪುಸ್ತಕಗಳಿದ್ದವು. ಅದರ ಮೇಲೆ 'ಲಿಟ್ಲ್ ಫ್ರೀ ಲೈಬ್ರರಿ' ಎಂದು ಬರೆದಿತ್ತು. ಇದೂ ಅದೇ ರೀತಿಯ ಪುಸ್ತಕ ದಾಸೋಹದ ವಿಧಾನವೇ ಎಂದುಕೊಂಡು ಈ ಲಿಟ್ಲ್ ಫ್ರೀ ಲೈಬ್ರರಿ ಹಿನ್ನೆಲೆ ತಿಳಿದುಕೊಳ್ಳೋಣವೆಂದು ಅದರ ವೆಬ್‌ತಾಣ ಹುಡುಕಿದೆ.

ಆ ವೆಬ್‌ತಾಣದಲ್ಲಿ ಅವರ ಪರಿಚಯವನ್ನು ಜಗತ್ತಿನ ಬಹು ಎಲ್ಲ ಭಾಷೆಗಳಲ್ಲಿಯೂ ಓದಲು ಸಾಧ್ಯವಿದ್ದು, ಅದು ಕನ್ನಡದಲ್ಲಿ ನೀಡಿದ ಮಾಹಿತಿ ಈ ಮುಂದಿನಂತಿದೆ:

'ನಮ್ಮ ಮಿಷನ್ ಮತ್ತು ವಿಷನ್ ಲಿಟಲ್ ಫ್ರೀ ಲೈಬ್ರರಿ ಎಂಬುದು ಮಿನ್ನೇಸೋಟದ ಸೇಂಟ್ ಪಾಲ್ ಮೂಲದ ಲಾಭೋದ್ದೇಶವಿಲ್ಲದ ಸಂಸ್ಥೆ. ಸಮುದಾಯವನ್ನು ನಿರ್ಮಿಸಲು, ಓದುಗರನ್ನು ಪ್ರೇರೇಪಿಸಲು ಮತ್ತು ಸ್ವಯಂಸೇವಕ ನೇತೃತ್ವದ ಲಿಟಲ್ ಫ್ರೀ ಲೈಬ್ರರಿ, ಪುಸ್ತಕ ವಿನಿಮಯ ಪೆಟ್ಟಿಗೆಗಳ ಜಾಗತಿಕ ನೆಟ್‌ವರ್ಕ್ ಮೂಲಕ ಎಲ್ಲರಿಗೂ ಪುಸ್ತಕ ಪ್ರವೇಶವನ್ನು ವಿಸ್ತರಿಸಲು ವೇಗವರ್ಧಕವಾಗುವುದು ನಮ್ಮ ಉದ್ದೇಶವಾಗಿದೆ. ನಮ್ಮ ದೃಷ್ಟಿ ಪ್ರತಿ ಸಮುದಾಯದಲ್ಲಿ ಸ್ವಲ್ಪ ಉಚಿತ ಗ್ರಂಥಾಲಯ ಮತ್ತು ಪ್ರತಿ ಓದುಗರಿಗೆ ಪುಸ್ತಕ. ಓದಲು ವೈಯಕ್ತಿಕವಾಗಿ ಸಂಬಂಧಿತ ಪುಸ್ತಕವನ್ನು ಅನ್ವೇಷಿಸುವ ಅವಕಾಶವು ಸಮಯ, ಸ್ಥಳ ಅಥವಾ ಸವಲತ್ತುಗಳಿಂದ ಸೀಮಿತವಾಗಿಲ್ಲದಿದ್ದಾಗ ಎಲ್ಲಾ ಜನರು ಸಬಲರಾಗುತ್ತಾರೆ ಎಂದು ನಾವು ನಂಬುತ್ತೇವೆ'.

ಹೌದು. ಇದಂತೂ ನಿಜ, ಸವಲತ್ತು ಮತ್ತು ಸೌಲಭ್ಯವಿಲ್ಲದ ಜನರನ್ನು ಪುಸ್ತಕಗಳು ತಲುಪಿದಾಗ ಖಂಡಿತಾ ಅವರು ಸಬಲರಾಗುತ್ತಾರೆ. ಇಂದು ಡಿಜಿಟಲ್ ಯುಗದಲ್ಲಿ ಕಿಂಡಲ್, ಐಪ್ಯಾಡ್, ಟ್ಯಾಬ್ಲೆಟ್‌ಗಳ ಇ–ಪುಸ್ತಕಗಳ (ಎಲೆಕ್ಟ್ರಾನಿಕ್ ಪುಸ್ತಕಗಳು) ಜಗತ್ತಿನಲ್ಲಿ ಪುಸ್ತಕ ವಿತರಣೆ ಹೊಸದೇ ರೂಪ ಪಡೆದಿದೆ. ಇಂದು ಇ–ಪುಸ್ತಕಗಳನ್ನು ಆನ್‌ಲೈನ್‌ನಲ್ಲಿ ಖರೀದಿಸುವುದು, ಎರವಲು ನೀಡುವುದು ಸಾಮಾನ್ಯವಾಗಿದೆ. ಜಗತ್ತಿನಲ್ಲಿ ಯಾವ ಮೂಲೆಯಲ್ಲಿದ್ದರೂ ಇಂಟರ್‌ನೆಟ್ ಇದ್ದಲ್ಲಿ ಇ–ಪುಸ್ತಕಗಳನ್ನು ಪಡೆಯುವುದು ಬಹಳ ಸುಲಭ. ಆದರೆ ಲಿಟ್ಲ್ ಫ್ರೀ ಲೈಬ್ರರಿಯವರು ಹೇಳಿರುವಂತೆ ಮುದ್ರಿತ ಪುಸ್ತಕಗಳಿಗೆ ಉಚಿತ ಗ್ರಂಥಾಲಯ, ಪುಸ್ತಕಗಳನ್ನು ಅನ್ವೇಷಿಸುವ ಅವಕಾಶ, ಸಮಯ, ಸ್ಥಳ ಹಾಗೂ ಸವಲತ್ತುಗಳಿಂದ ವಂಚಿತರಾಗಿರುವವರೇ ಇಂದು ಜಗತ್ತಿನಲ್ಲಿ ಹೆಚ್ಚಿರುವುದರಿಂದ ಮುದ್ರಿತ ಪುಸ್ತಕಗಳ ರೀತಿಯೇ ಇ–ಪುಸ್ತಕಗಳು ಸಹ ದೊರೆಯುವುದು ಸುಲಭವಲ್ಲ.

ಮುದ್ರಿತ ಪುಸ್ತಕಗಳು ಇಂದಲ್ಲ ನಾಳೆ ಇಲ್ಲವಾಗುತ್ತವೆ. ಏಕೆಂದರೆ, ಕಾಗದದ ಪುಸ್ತಕ ಮುದ್ರಣ ಮತ್ತು ಮಾರಾಟ ಆರ್ಥಿಕವಾಗಿ ಮತ್ತು ಪರಿಸರದ ದೃಷ್ಟಿಯಿಂದ ಲಾಭದಾಯಕವಾಗಿರುವುದಿಲ್ಲ. ಅಷ್ಟಲ್ಲದೆ ಅಕ್ಷರ ಮುಂದೆ ಮತ್ತಾವ ರೂಪದಲ್ಲಿ ಬರುತ್ತದೋ ಯಾರಿಗೆ ಗೊತ್ತು? ಒಂದಂತೂ ನಿಜ. ಏನೇ ಆದರೂ ಪುಸ್ತಕಕ್ಕೆ ಅಳಿವಿದ್ದರೂ ಅಕ್ಷರಕ್ಕೆ ಅಳಿವಿರುವುದಿಲ್ಲ. ಆದರೆ ಜನರು ಸಬಲರಾಗಬೇಕಾದಲ್ಲಿ ಅವು ಸುಲಭವಾಗಿ ಎಲ್ಲರಿಗೂ ತಲುಪಬೇಕಾಗಿರುವುದು ಅಷ್ಟೇ ಮುಖ್ಯ.

ಪ್ರತಿಕ್ರಿಯಿಸಿ: **feedback@sudha.co.in**